VIJAYAKUMAR KANNUR
Digitally signed by VIJAYAKUMAR KANNUR
Date: 2025.10.16 18:03:05 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು, ಜೆ.ಎಂ.ಎಫ್.ಸಿ./ಎಂ.ಎ.ಸಿ.ಟಿ. ಇವರ ನ್ಯಾಯಾಲಯ, ಮುಧೋಳ**
**ಇಂದು ದಿನಾಂಕ 16.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮಧ್ಯಂತರ ಅರ್ಜಿ ಸಂಖ್ಯೆ 6 ರ ಮೇಲಿನ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಸಲಾಯಿತು ಮುಖ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರ ಪರವಾಗಿ ವಕೀಲರಿಂದ**

1. ತಹಶೀಲ್ದಾರ್ ಮುಧೋಳ ಇವರು ನೀಡಿರುವ ದಿಃ 20.06.2008 ರಂದು ಅಂಗವಿಕಲರ ಮಾಶ್ಯಾಸನ ಆದೇಶದ ಪತ್ರವನ್ನು ನಿಪಿ **18** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಎದುರುದಾರ 2 ರವರ ಪರ ವಕೀಲರಾದ ಶ್ರೀ ಎ ಸಿ ಎನ್ ರವರ ಪರವಾಗಿಃ**

ಅರ್ಜಿದಾರ ಕಿವುಡ ಮತ್ತು ಮೂಗನಾಗಿರುವುದರಿಂದ ಆತನ ಭಾಷೆಗೆ ಸಂಬಂಧಪಟ್ಟಂತೆ ಪರಿಣಿತ ಹೊಂದಿರುವ ವ್ಯಕ್ತಿಗಳನ್ನು ನಾನು ಸಾಕ್ಷಿಯನ್ನಾಗಿ ವಿಚಾರಣೆ ಮಾಡಿಸಿರುವುದಿಲ್ಲ ಎಂದರೆ ಸರಿ. ನಿಪಿ 18 ರ ದಾಖಲಾತಿಯು ಅರ್ಜಿದಾರನಿಗೆ ಸಂಬಂಧಪಟ್ಟಂತೆ ಅಂಗವಿಕಲತೆಯ ಪ್ರಮಾಣ ಪತ್ರವಾಗಿರುವುದು. ಈ ಮೊದಲು ನಿಪಿ 18 ರ ದಾಖಲೆಯನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಿಪಿ 18 ರ ಪ್ರಕಾರ ಈಗ ಸರಕಾರದಿಂದ ಯಾವುದೇ ಮಾಶ್ಯಾಸನ ನೀಡುವುದಿಲ್ಲ. ನಿಪಿ 18 ರ ದಾಖಲಾತಿ ಅರ್ಜಿದಾರನಿಗೆ ಸಂಬಂಧಪಟ್ಟಿರುವುದಿಲ್ಲ, ಅದು ಬೇರೆಯವರಿಗೆ ಸಂಬಂಧಪಟ್ಟಿರುವ ಖೊಟ್ಟಿ ದಾಖಲೆಯನ್ನು ತೆಗೆದುಕೊಂಡು ಬಂದು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

2. ಅರ್ಜಿದಾರ ಮಹಾಲಿಂಗಪೂರ ಗ್ರಾಮದ ನಿವಾಸಿ ಎಂದು ತೋರಿಸುವ ಸಲುವಾಗಿ ನಾನು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಾನು ಅರ್ಜಿದಾರನ ಪರವಾಗಿ ಖೊಟ್ಟಿಯಾಗಿ ಪರಿಹಾರ ಹಣ ಪಡೆಯುವ ಸಲುವಾಗಿ ನಾನು ಖೊಟ್ಟಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 7 ರ ದಾಖಲೆಯಲ್ಲಿ ದಿಃ 24.05.2024 ಅಂತ ನಮೂದು ಮಾಡಿರುವರು ಎಂದರೆ ಸರಿ. ಈ ಅಪಘಾತ ದಿಃ 24.04.2024 ರಂದು ಮಧ್ಯಾಹ್ನ 3.00 ಗಂಟೆಯಾಗಿರುವುದು ಎಂದರೆ ಸರಿ. ಈ ಅಪಘಾತವಾದ ಸಮಯದಲ್ಲಿ 1 ನೇ ಎದುರುದಾರ ವಾಹನದ ವಿಮೆಯು ಚಾಲ್ತಿಯಲ್ಲಿ ಇರಲಿಲ್ಲ, ಆ ಕಾರಣಕ್ಕಾಗಿ ಎದುರುದಾರ 2 ರವರು ಪರಿಹಾರ ಹಣ ನೀಡಲು ಬಾಧ್ಯಸದ್ಧರಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR
Digitally signed by VIJAYAKUMAR KANNUR
Date: 2025.10.16 18:03:10 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ.,/ಎಂ ಎ ಸಿ ಟಿ., ಮುಧೋಳ